**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯ ಅಧಿಕಾರಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:25-11-2020 ರ ನಡವಳಿಗಳು**

**ವಿಷಯದ ಸಂಖ್ಯೆ:540/2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ವಿಭಾಗದಲ್ಲಿ ಖಾತಾ ನೊಂದಾವಣೆ, ವರ್ಗಾವಣೆ, ವಿಭಜನೆ, ಒಂದುಗೂಡಿಸುವಿಕೆ, ಸೇವೆಗಳ ಜೊತೆಗೆ ಖಾತಾ ಉದ್ಧೃತ ಭಾಗ, ಖಾತಾ ದೃಢೀಕರಣ ಪತ್ರಗಳನ್ನು ನೀಡಲಾಗುತ್ತದೆ. ಈ ಕಾರ್ಯವನ್ನು ಇ-ಆಸ್ತಿ ತಂತ್ರಾಂಶದ ಮೂಲಕ ಕೈಗೊಳ್ಳುವಂತೆ ಸರ್ಕಾರ ನಿರ್ದೇಶನ ನೀಡಿದ್ದು ಇದಕ್ಕಾಗಿ, ಇ-ಆಸ್ತಿ ತಂತ್ರಾಂಶ ವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ.

ಇ-ಆಸ್ತಿ ತಂತ್ರಾಂಶವನ್ನು ಜಾರಿಗೆ ತಂದ ಮೇಲೆ ಆನ್ ಲೈನ್ ಮೂಲಕ ವಸೂಲಾಗುವ ಮೊತ್ತವನ್ನು ಜಮಾ ಮಾಡಲು ಪ್ರತ್ಯೇಕ ಖಾತೆ ಅಗತ್ಯವಿದೆ ಎಂದು ಉಪ ಆಯುಕ್ತರು (ಕಂದಾಯ) ರವರು ಪ್ರಸ್ತಾವನೆ ಮೂಲಕ ಕೋರಿರುತ್ತಾರೆ. ಸದರಿಯವರ ಕೋರಿಕೆಯಂತೆ ಆನ್ ಲೈನ್ ಮೂಲಕ ವಸೂಲಾಗುವ ಈ ಶುಲ್ಕಗಳನ್ನು ಸಂಗ್ರಹಿಸಲು ಪ್ರತ್ಯೇಕ ಬ್ಯಾಂಕ್ ಖಾತೆಗಳನ್ನು ಕೆನರಾ ಬ್ಯಾಂಕ್, ಬಿಬಿಎಂಪಿ ಶಾಖೆಯಲ್ಲಿ ತೆರೆಯುವ ಬಗ್ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಟಿಪ್ಪಣಿ ಮಂಡಿಸಲು ಆಯುಕ್ತರು ಅನುಮೋದನೆ ನೀಡಿರುತ್ತಾರೆ.

ಸರ್ಕಾರ ಆದೇಶ ಸಂಖ್ಯೆ : FD 5 TAR 2017 dated : 30-01-2017 ರಂತೆ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯಲು ಅನುಮೋದನೆ ನೀಡುವ ಅಧಿಕಾರವು ಮಾನ್ಯ ಆಡಳಿತಾಧಿಕಾರಿಗಳಿಗೆ ಪ್ರದತ್ತವಾಗಿರುತ್ತದೆ ಅದರಂತೆ,

1. ಸುಧಾರಣಾ ವೆಚ್ಚ ಸಂಗ್ರಹಣಾ ಖಾತೆ- Betterment Charges Collection Account (E-Aasti)
2. ಆಡಳಿತಾತ್ಮಕ ವೆಚ್ಚ ಸಂಗ್ರಹಣಾ ಖಾತೆ-Administration Charges Collection Account (E-Aasti)
3. ಭಿಕ್ಷುಕರ ಉಪಕರದ ಎಸ್ಕ್ರೋ ಖಾತೆ-Beggary Cess Escrow Account
4. ಗ್ರಂಥಾಲಯ ಉಪಕರದ ಎಸ್ಕ್ರೋ ಖಾತೆ-Library Cess Escrow Account

ಈ ಮೇಲಿನ ಉದ್ದೇಶಗಳಿಗಾಗಿ ಮಾನ್ಯ ಆಯುಕ್ತರ ಹೆಸರಿನಲ್ಲಿ ಕೆನರಾ ಬ್ಯಾಂಕ್, ಬಿಬಿಎಂಪಿ ಶಾಖೆಯಲ್ಲಿ 4 ಪ್ರತ್ಯೇಕ ಬ್ಯಾಂಕ್ ಖಾತೆಗಳನ್ನು ತೆರೆಯಲು ಅನುಮೋದನೆ ಕೋರಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧಿಕಾರಗಳನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:24-11-2020 ರ ಟಿಪ್ಪಣಿ.

**ತೀರ್ಮಾನ :** ಆಯುಕ್ತರ ಟಿಪ್ಪಣಿ ಅನುಮೋದಿಸಿದೆ.

(ಗೌರವ ಗುಪ್ತ)
**ಆಡಳಿತಗಾರರು**